ಸೂಕ್ಷ್ಮ ಎಳೆಯೊಂದು ತಮ್ಮಿಬ್ಬರ ನಡುವೆ ಹುಟ್ಟಿಕೊಂಡಿದೆ. ಆದರೆ ಅದೇತಕ್ಕೋ... ಕಾರಣ ಅರಿಯಲಾರಳು.

ಅನ್ವರ ಮಾತುಕತೆಯಲ್ಲಿ ಅಸಮಾಧಾನ ವ್ಯಕ್ತಪಡಿಸುತ್ತಿದ್ದ. ಅತೃಪ್ತನಂತಿದ್ದ.

ಗಮನಿಸಿಯೂ ಸುಮ್ಮನಿದ್ದಳು ಏನೂ ತೋಚದೇ...

ಯಾ ಅಲ್ಲಾ... ಎಲ್ಲವೂ ಸರಿಯಾಗಲಿ... ಏನೂ ಮುರಿಯದಿರಲಿ... ಅವಳ ಹೃದಯ ಕಂಪಿಸುತ್ತಿತ್ತು.

ಒಂದು ದಿನ ಶಾಹೆನಾಳಲ್ಲಿ ಪ್ರಕಟವಾಗಿ, ಹೇಳಿಯೂಬಿಟ್ಟ.

''ಮದುವೆಯಾಗಿ ಒಂದು ವರ್ಷವಾದರೂ ನೀನೊಂದು ಮಗುವನ್ನು ಹೆರಲಿಲ್ಲ. ಇಕ್ಬಾಲರು ತಮ್ಮ ಮಗಳು ಸಾಹಿರಾಳಿಗಾಗಿ ಆಗಿಂದಲೂ ನನ್ನನ್ನು ಒತ್ತಾಯಿಸುತ್ತಲೇ ಇದ್ದಾರೆ...''

ಶಾಹೆನಾಳ ಬಿಳಿಚಿದ ಮುಖ ಕಂಡು ಅವಳನ್ನು ಸಂತೈಸುವಂತೆ ಹೇಳಿದ. ''ನೋಡು, ನನಗೂ ಆಸೆ–ಬಯಕೆಗಳಿವೆ. ನಿನ್ನ ಸುಟ್ಟ ಮುಖ ನನ್ನ ಎಷ್ಟೋ ಕನಸುಗಳನ್ನು ಕೊಂದುಹಾಕಿದೆ. ನಿನ್ನ ಅಬ್ಬು ತಮ್ಮ ಒಬ್ಬಳೇ ಮಗಳಿಗಾಗಿ ಸಾಕಷ್ಟು ಚಿನ್ನ, ಹಣ ಎಲ್ಲ ಕೊಟ್ಟರೇನೋ ಸರಿ... ಆದರೆ ನನಗೂ ಈಗೀಗ ಚಂದದ ಹುಡುಗಿಯೊಬ್ಬಳು ಪತ್ನಿಯಾಗಿದ್ದರೆ ಅನ್ನಿಸುತ್ತದೆ. ಹಾಗೆಂದು ನೀನೇನೂ ಹೆದರಬೇಕಿಲ್ಲ. ನಿನ್ನ ಅಬ್ಬುವಿಗೆ ಮಾತು ಕೊಟ್ಟಿದ್ದಂತೇ ನಾನು ಜೀವನ ಪೂರ್ತಿ ನಿನಗೆ ರಕ್ಷಣೆ ನೀಡುತ್ತೇನೆ. ನೀನೂ ಸಾಹಿರಾಳೊಂದಿಗೆ ಈ ಮನೆಯಲ್ಲಿ ಹಾಯಾಗಿರಬಹುದು.''

ಅನ್ವರ ಶಾಹೆನಾಳ ಪ್ರತಿಕ್ರಿಯೆಗೂ ಕಾಯದೇ ಹೊರಟುಹೋದ.

ಶಾಹೆನಾ ಸ್ತಂಭೀಭೂತಳಾಗಿದ್ದಳು!

ಯಾವ ಸಂತಸವನ್ನು ಶಾಶ್ವತವೆಂದು ಬೀಗಿದ್ದಳೋ ಅದು ಕನಸಂತೆ ಒಡೆದು ಚೂರಾಗಿತ್ತು.

ವಾಸ್ತವ ನಿಚ್ಚಳವಾಗಿ ಕಾಣಿಸುತ್ತಿತ್ತು.

ಆರೀಫನಾದರೋ ಮದುವೆಗೆ ಮುನ್ನವೇ ತನ್ನನ್ನು ತಿರಸ್ಕರಿಸಿದ್ದ.

ಆದರೆ... ಅನ್ವರ... ಎಲ್ಲ ತಿಳಿದೂ ತನ್ನ ಕೈ ಹಿಡಿದ. ಹೃದಯದಲ್ಲಿಟ್ಟು ಪೂಜಿಸಿದ್ದಳು ಅವನನ್ನು. ತನ್ನ ಒಳ್ಳೆಯ ನಸೀಬಿಗಾಗಿ ಹರ್ಷಿತಳಾಗಿದ್ದಳು. ಅನ್ವರನ ಬೇಕು ಬೇಡಗಳನ್ನು ಗಮನಿಸುತ್ತ ಅವನಿಗೆ ವಿಧೇಯಳಾಗಿ ನಿಷ್ಠಳಾಗಿ ಉಳಿದಿದ್ದಳು.

ಆದರೆ... ಕನಸು ಇಷ್ಟು ಬೇಗ ಒಡೆದೀತೆಂದು ಎಣಿಸಿರಲಿಲ್ಲ.

ಹಾಗಿದ್ದರೆ ಈ ಜಗದಲ್ಲಿ ಎಲ್ಲವೂ ಭ್ರಮೆಗಳೇ?

ಸಂಬಂಧ–ಪ್ರೀತಿ–ಸ್ನೇಹ... ಎಷ್ಟು ಅಸ್ಥಿರ!

ಶಾಹೆನಾ ದಿಕ್ಕು ತೋಚದೇ ಮೌನವಾಗಿ ಕುಳಿತು, ಹೊರಗೆ ಆಡಿಕೊಳ್ಳುತ್ತಿರುವ ಮಕ್ಕಳನ್ನೇ ದಿಟ್ಟಿಸುತ್ತ ಉಳಿದಳು.

ಅವಳಿಗೆ ನೆನಪಿಗೆ ಬಂತು. ಚಿಕ್ಕಂದಿನಲ್ಲಿ ಸ್ನೇಹಿತರೊಂದಿಗೆ ಸೇರಿ ತಾನಾಡುತ್ತಿದ್ದ ಆಟ... ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ಅಕ್ಕ–ಪಕ್ಕ ಅವಿತುಕೊಂಡವರಿಗಾಗಿ ತಡಕಾಡುತ್ತ ಅವರ ಬಿಟ್ಟು ಅವರ ಬಿಟ್ಟು... ಇವರ್‍ಯಾರು...

ಅವಳ ಕಣ್ಣುಗಳಿಂದ ಅಶ್ರುಗಳು ಹರಿಯಲಾರಂಭಿಸಿದವು.

ಮೆತ್ತಗೇ ಹೇಳಿಕೊಂಡಳು. ಅವರ ಬಿಟ್ಟು... ಅವರ ಬಿಟ್ಟು ಇವರ್‍ಯಾರು?